**ದಿನಾಂಕಃ 12.10.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ. ಹೆಚ.ಎನ್.ಬಿ.ಎನ್ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ತಿಳಿದು ಸಹಿ ಮಾಡಿರುತ್ತೇನೆ.

ದಿನಾಂಕ 08.04.2013 ರ ಪತ್ರವನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಡಿ-1 ಎಂದು, ದಿನಾಂಕ 24.06.2013 ರ ಪತ್ರವನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಡಿ-2 ಎಂದು, ದಿನಾಂಕ 16.12.2014 ರಂದು ಸುಂದರೇಶರವರು ಬರೆದ ಅರ್ಜಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಡಿ-3 ಎಂದು, ದಿನಾಂಕ 19.12.2014 ರ ಪತ್ರವನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಡಿ-4 ಎಂದು, ಸುಂದರೇಶನ್ ರವರ ವರ್ಷಿಕ ಮಾಹಿತಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಡಿ-5 ಎಂದು, ದಿನಾಂಕ 08.04.2013 ರಂದು ಸುಂದರೇಶನ್ ರವರು ನೀಡಿದ ಅರ್ಜಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ-6 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ. ಹೆಚ್.ಸಿ ವಕೀಲರಿಂದಃ

ನಾನು ಈಗ ಪ್ರಸ್ತುತವಾಗಿ ಮೈಸೂರಿನ ಎಲ್.ಐ.ಸಿ ಕಚೇರಿಯ ಲೀಗಲ್ ಸೆಕ್ಷನ್ ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಸುಂದರೇಶನ್ ರವರ ಖಾತೆಯಲ್ಲಿ ರೂ. 4,93,962/-ಗಳ ಹಣವಿರುತ್ತದೆ ಎಂದರೆ ನನಗೆ ನಿಖರವಾಗಿ ಗೊತ್ತಿಲ್ಲ. ಸಾಮಾನ್ಯವಾಗಿ ನಮ್ಮ ಎಲ್.ಐ.ಸಿ ಕಚೇರಿಯಲ್ಲಿ ಒಬ್ಬ ವ್ಯಕ್ತಿಯೂ ಒಂದು ಪಾಲಿಸಿಯನ್ನು ತೆಗೆದುಕೊಂಡಾಗ ಸದರಿ ಪಾಲಿಸಿಗೆ ಒಬ್ಬರನ್ನು ನಾಮಿನಿಯಾಗಿ ಸೂಚಿಸುತ್ತಾರೆ ಎಂದರೆ ಸರಿ. ಸುರಂದರೇಶನ್ ರವರು ಪಾಲಿಸಿ ತೆಗೆದುಕೊಂಡಾಗ ಸದರಿ ಪಾಲಿಸಿಗೆ ಅವರ ಹೆಂಡತಿ ಮಂಜುಳರವರನ್ನು ನಾಮಿನಿಯಾಗಿ ಹೆಸರಿಸಿದ್ದರೂ ಎಂದರೆ ಸರಿ. ಸುಂದರೇಶನ್ ರವರು ಮರಣ ಹೊಂದಿರುತ್ತಾರೆ ಎಂದರೆ

ಸರಿ. ಸುಂದರೇಶನ್ ರವರ ಪತ್ನಿಯೂ ಮರಣ ಹೊಂದಿದ್ದರಿಂದ ಸದರಿ ನಾಮಿನಿಯನ್ನು ತನ್ನ ಸ್ನೇಹಿತ ದರ್ಶನ್ ರವರ ಹೆಸರಿಗೆ ವರ್ಗಾಯಿಸಬೇಕೆಂದು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸುಂದರೇಶನ್ ರವರು ನಿಡಿ-3 ರಂತೆ ಅರ್ಜಿ ಸಲ್ಲಿಸಿ ತಮ್ಮ ಮರಣದ ನಂತರ ತಮ್ಮ ಖಾತೆಯಲ್ಲಿದ್ದ ಹಣವನ್ನು ದರ್ಶನ್ ರವರ ಹೆಸರಿಗೆ ನೀಡಲು ನನ್ನದು ಯಾವುದೇ ತಕರಾರು ಇಲ್ಲವೆಂದು ತಿಳಿಸಿರುತ್ತಾರೆ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ವ್ಯಯಕ್ತಿಕ ಪಾಲಿಸಿಯಾದರೆ ಸಾಮಾನ್ಯವಾಗಿ ಪಾಲಿಸಿದಾರರ ಅರ್ಜಿಯ ಮೇಲೆ ದಾಖಲಾತಿಗಳನ್ನು ಪಡೆದುಕೊಂಡು ನಾಮಿನಿಯನ್ನು ಬದಲಾಯಿಸುತ್ತೇವೆ ಆದರೆ ಈ ದಾವೆಯಲ್ಲಿ ಸುಂದರೇಶನ್ ರವರ ಪಾಲಿಸಿಯೂ ಸಮೂಹ ಪಾಲಿಸಿಯಾದರಿಂದ ಸಮೂಹ ಪಾಲಿಸಿಯ ಟ್ರಸ್ಟಿಯವರಿಗೆ ನಾವು ಪತ್ರ ಬರೆದಿರುತ್ತೇವೆ ಎಂದು ನುಡಿಯುತ್ತಾರೆ. ಸುಂದರೇಶನ್ ರವರು ತಮ್ಮ ಅರ್ಜಿಯ ಜೊತೆಗೆ ಮರಣಶಾಸನದ ಪ್ರತಿಯನ್ನು ಸಲ್ಲಿಸಿದ್ದರು ಎಂದರೆ ಸರಿ.

ಸುಂದರೇಶನ್ ರವರು ಅರ್ಜಿ ಸಲ್ಲಿಸಿದ್ದರು ಸಹ ನಾವುಗಳು ಯಾವುದೇ ರೀತಿಯ ನಾಮಿನಿಯನ್ನು ಬದಲಾಯಿಸಿಲ್ಲ ಎಂದರೆ ಸರಿಯಲ್ಲ. ನಾವು ತಿಳಿಸಿದಂತೆ ವಾದಿಯವರು ದಾಖಾಲಾತಿಗಳನ್ನು ಪಡೆದುಕೊಳ್ಳಲು ನ್ಯಾಯಾಲಯಕ್ಕೆ ದಾವೆಯನ್ನು ಸಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮರಣಶಾಸನಕ್ಕೆ ತಕರಾರು ಸಲ್ಲಿಸಲು ಯಾವುದೇ ಅರ್ಹತೆ ಇಲ್ಲ ಎಂದರೆ ಸರಿಯಲ್ಲ. ಸುಂದರೇಶನ್ ರವರ ಖಾತೆಯಲ್ಲಿ ಇರುವ ಹಣವನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ ಈಗ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಲಯ, ಟಿ ನರಸಿಪುರ